85-K

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003**

**KARNATAKA SCHOOL EXAMINATION AND ASSESSMENT BOARD**
**6th Cross,Malleshwaram, Bengaluru – 560 003**

# 2025–26 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 4

# S.S.L.C. MODEL QUESTION PAPER - 4 : 2025 - 26

## ವಿಷಯ :ಸಮಾಜವಿಜ್ಞಾನ

## Subject :SOCIAL SCIENCE

**ವಿಷಯ ಸಂಕೇತ :85-K** **Subject Code :85-K**

ಸಮಯ :3ಗಂಟೆ15 ನಿಮಿಷಗಳು ] [Time : 3 Hours 15 Minutes

ಗರಿಷ್ಠ ಅಂಕಗಳು :80] [ Max. Marks :80

---

**ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ.** **8x1=8**

1. ಎರಡನೇ ಮಹಾಯುದ್ಧದ ನಂತರ ಶೀತಲ ಸಮರದಲ್ಲಿ ತೊಡಗಿದ ರಾಷ್ಟ್ರಗಳು
   A) ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಚೀನಾ
   B) ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಜಪಾನ್
   C) ಸೋವಿಯತ್ ರಷ್ಯಾ ಮತ್ತು ಚೀನಾ
   D) ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತು ಸೋವಿಯತ್ ರಷ್ಯಾ
2. ಹದಿನಾಡು ಎಂಬ ಪಾಳೆಪಟ್ಟಿನ ಮಹಾರಾಣಿ ತನ್ನ ಮಗಳನ್ನು ಯದುರಾಯನಿಗೆ ಕೊಟ್ಟು ಮದುವೆ ಮಾಡಿದಳು. ಏಕೆಂದರೆ
   A) ಮಾರನಾಯಕನು ಯದುರಾಯನಿಗೆ ಮಗಳನ್ನು ಕೊಡಬೇಕೆಂದು ಮಹಾರಾಣಿಗೆ ಆಜ್ಞೆ ಮಾಡಿದ್ದನು
   B) ಯದುರಾಯನು ಸುಂದರನಾಗಿದ್ದನು ಮತ್ತು ಮಹಾರಾಣಿಯ ಮಗಳು ಅವನನ್ನು ಪ್ರೀತಿಸುತ್ತಿದ್ದಳು
   C) ಚಾಮರಾಜನು ಯದುರಾಯನಿಗೆ ಮಗಳನ್ನು ಕೊಡುವಂತೆ ಮಹಾರಾಣಿಯನ್ನು ಒತ್ತಾಯಿಸಿದನು
   D) ಯದುರಾಯನು ಮಾರನಾಯಕನನ್ನು ಕೊಂದು ಮಹಾರಾಣಿಗೆ ಸಹಾಯ ಮಾಡಿದನು
3. ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ಕಚೇರಿ ಇರುವುದು
   A) ನ್ಯೂಯಾರ್ಕಿನಲ್ಲಿ
   B) ಪ್ಯಾರಿಸ್‌ನಲ್ಲಿ
   C) ರೋಮ್‌ನಲ್ಲಿ
   D) ಜಿನೇವಾದಲ್ಲಿ
4. ಮೌನ ಕಣಿವೆ ಆಂದೋಲನ ಪ್ರಾರಂಭವಾದ ರಾಜ್ಯ
   A) ಕೇರಳ
   B) ತಮಿಳುನಾಡು
   C) ಗುಜರಾತ್
   D) ಪಶ್ಚಿಮ ಬಂಗಾಳ
5. ಭಾರತದ ಮೊದಲ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಪ್ರಾರಂಭವಾದದ್ದು
   A) ಸೆರಾಂಪುರದಲ್ಲಿ
   B) ಸೇಲಂನಲ್ಲಿ
   C) ಭದ್ರಾವತಿಯಲ್ಲಿ
   D) ಕುಲ್ಟಿಯಲ್ಲಿ
6. ಭಾರತದ ಪ್ರಾದೇಶಿಕ ಮತ್ತು ಸ್ವತಂತ್ರ ಜಿ.ಪಿ.ಎಸ್ ವ್ಯವಸ್ಥೆಯ ಹೆಸರು
   A) ಸ್ಪುಟ್ನಿಕ್
   B) ಪಾಥ್ ಫೈಂಡರ್
   C) ನಾವಿಕ್
   D) ಮೈತ್ರಿ

7. ಏಕರೂಪದ  ಪಂಚಾಯತ್ ರಾಜ್ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟ ಭಾರತ ಸಂವಿಧಾನದ ತಿದ್ದುಪಡಿ

A) 42ನೇತಿದ್ದುಪಡಿ

B) 46ನೇತಿದ್ದುಪಡಿ

C) 73ನೇತಿದ್ದುಪಡಿ

D) 78ನೇತಿದ್ದುಪಡಿ

8. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಸ್ಥಾಪನೆಯಾದ ವರ್ಷ

A) 1975

B) 1976

C) 1977

D) 1978

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ: 8X1=8**

9. ಮಹಲ್ ಎಂದರೇನು?

10. ಸೋಷಿಯಲಿಷ್ಟರು ಮತ್ತು ಕಮ್ಯುನಿಸ್ಟರನ್ನು ಹಿಟ್ಲರನು ಹೇಗೆ ಹತ್ತಿಕ್ಕಿದನು?

11. ದ್ವಿತೀಯ ಮಹಾಯುದ್ಧದ ಬಳಿಕ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಸ್ಥಾಪನೆಯಾದ ವಿಶ್ವಸಂಸ್ಥೆ ಆಶ್ರಯದ ಸಂಸ್ಥೆ ಯಾವುದು?

12. 'ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ' ಎಂದು ಹೇಳಿದವರು ಯಾರು?

13. ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಏಕೆ?

14. ನಿರ್ಗಮನ ಮಾನ್ಸೂನ್ ಮಾರುತಗಳ ಕಾಲದಲ್ಲಿ ಬಂಗಾಳ ಕೊಲ್ಲಿಯಲ್ಲಿ ಆವರ್ತ ಮಾರುತಗಳು ಉಂಟಾಗಲು ಕಾರಣವೇನು?

15. ಆಯವ್ಯಯವನ್ನು ವ್ಯಾಖ್ಯಾನಿಸಿ.

16. ನಾನು ಭವಿಷ್ಯದಲ್ಲಿ ಮನೆ ಕಟ್ಟಬೇಕಿದೆ.  ಅದಕ್ಕಾಗಿ ಈಗಿನಿಂದಲೇ ಉಳಿತಾಯ ಮಾಡಲು ತೆರೆಯಬೇಕಾದ ಅತ್ಯಂತ ಸೂಕ್ತ ಬ್ಯಾಂಕ್ ಖಾತೆ ಯಾವುದು?

**III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: 8x2=16**

17. ಲೂಥರ್ ಗುಲಿಕ್‌ರ POSDCORB ಪರಿಕಲ್ಪನೆಯ ಪ್ರಕಾರ ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ವಿವರಿಸಿ.

**ಅಥವಾ**

ಆಹಾರ ಮತ್ತು ಕೃಷಿ ಸಂಸ್ಥೆಯ ಉದ್ದೇಶಗಳನ್ನು ವಿವರಿಸಿ.

18. ವರದಕ್ಷಿಣೆ ಪಿಡುಗನ್ನು ಹೇಗೆ ನಿವಾರಿಸಬಹುದು?

**ಅಥವಾ**

ಸಾಮಾಜಿಕ ಸ್ತರವಿನ್ಯಾಸವು ಕಾಲದಿಂದ ಕಾಲಕ್ಕೆ ಹಾಗೂ ದೇಶದಿಂದ ದೇಶಕ್ಕೆ ಹೇಗೆ ಭಿನ್ನವಾಗಿದೆ?

19. ''ಮೂರನೇ ಆಂಗ್ಲೋ ಮಾರಾಠಾ ಯುದ್ಧವು ಮಾರಾಠರ ಅವನತಿಗೆ ಕಾರಣವಾಯಿತು''ಈ ಹೇಳಿಕೆಯನ್ನು ಸಮರ್ಥಿಸಿ.

20. ರಾಜ್ಯ ಪುನರ್ವಿಂಗಡನಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ಹೆಸರಿಸಿ.

21. ಭಾರತದಲ್ಲಿಬೆಳೆಮಾದರಿಯನ್ನುಪ್ರಭಾವಿಸುವನೈಸರ್ಗಿಕಮತ್ತುಸಾಮಾಜಿಕಅಂಶಗಳನ್ನುತಿಳಿಸಿ.

22. ಮಳೆನೀರು ಕೊಯ್ಲಿನ ಪ್ರಾಮುಖ್ಯತೆಯನ್ನು ವಿವರಿಸಿ.

23. ನೀತಿ ಆಯೋಗದ ಉದ್ದೇಶಗಳಾವುವು?

24. ಉದ್ಯಮಶೀಲತೆಯು ಒಂದು ಸೃಜನಾತ್ಮಕ ಕಾರ್ಯವಾಗಿದೆ. ಸಮರ್ಥಿಸಿ.

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ:** **9x3=27**

25. ಡಚ್ಚರ ವಿರುದ್ಧದ ಮಾರ್ತಾಂಡವರ್ಮನ ಹೋರಾಟವನ್ನು ವಿವರಿಸಿ.

ಅಥವಾ

ಭಾರತದಲ್ಲಿ ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ವಿವರಿಸಿ.

26. ಪ್ರವಾಹದಿಂದ ಉಂಟಾಗುವ ಪರಿಣಾಮಗಳಾವುವು?

ಅಥವಾ

ಭಾರತದಲ್ಲಿ ರಸ್ತೆಗಳ ಪ್ರಾಮುಖ್ಯತೆ ಏನು?

27. ಅಂಚೆ ಕಚೇರಿಗಳು ಹಲವಾರು ಹಣಕಾಸು ಸೇವೆಗಳನ್ನು ಒದಗಿಸುತ್ತವೆ. ವಿವರಿಸಿ.

ಅಥವಾ

ಸ್ವಯಂ ಉದ್ಯೋಗ ಪ್ರಾರಂಭಿಸಲು ಉದ್ಯಮಿಗಳಿಗೆ ಹಲವಾರು ಹಣಕಾಸು ಸಂಸ್ಥೆಗಳು ಸಾಲ ನೀಡುತ್ತವೆ, ವಿವರಿಸಿ.

28. ಸಾರ್ವಜನಿಕ ಹಣಕಾಸು, ವೈಯಕ್ತಿಕ ಹಣಕಾಸಿಗಿಂತ ಹೇಗೆ ಭಿನ್ನವಾಗಿದೆ?

ಅಥವಾ

ಅಧಿಕಾರ ವಿಕೇಂದ್ರೀಕರಣವು ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯನ್ನು ಎತ್ತಿ ಹಿಡಿಯುತ್ತದೆ, ಹೇಗೆ?

29. ಅಲಿಘರ್ ಚಳುವಳಿಯ ಉದ್ದೇಶಗಳನ್ನು ತಿಳಿಸಿ.

30. ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮವು ಹಲವು ಕಾರಣಗಳಿಂದ ವಿಫಲವಾಯಿತು. ಸ್ಪಷ್ಟೀಕರಿಸಿ.

31. ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳನ್ನು ವಿವರಿಸಿರಿ.

32. ನಿರುದ್ಯೋಗಕ್ಕೆ ಕಾರಣಗಳನ್ನು ನಿರೂಪಿಸಿ.

33. ನಿತ್ಯಹರಿದ್ವರ್ಣದ ಕಾಡುಗಳು ಮತ್ತು ಮಾನ್ಸೂನ್ ಕಾಡುಗಳ ನಡುವಿನ ವ್ಯತ್ಯಾಸಗಳಾವುವು?

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ:** **4x4=16**

34. ಕಿತ್ತೂರಿನ ಸ್ವಾತಂತ್ರ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವನ್ನು ವಿವರಿಸಿ.

ಅಥವಾ

ಆನಿ ಬೆಸೆಂಟರ ಸುಧಾರಣಾ ಕ್ರಮಗಳನ್ನು ವಿವರಿಸಿ.

34. ಮಣ್ಣಿನ ಸಂರಕ್ಷಣೆಯು ಅತ್ಯಂತ ಅವಶ್ಯಕವಾಗಿದೆ. ಏಕೆ?

ಅಥವಾ

ಭಾರತದಲ್ಲಿ ಕೈಗಾರಿಕೆಗಳು ಕೆಲವೇ ಪ್ರದೇಶಗಳಲ್ಲಿ ಸ್ಥಾನೀಕರಣಗೊಂಡಿವೆ. ಏಕೆ?

36. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರವನ್ನು ತಿಳಿಸಿ.

37. ಲಿಂಗತ್ವ ಅಲ್ಪ ಸಂಖ್ಯಾತರಿಗೆ ಆಗುವ ತಾರತಮ್ಯವನ್ನು ಹೋಗಲಾಡಿಸಲು ಹಲವಾರು ಉಪಕ್ರಮಗಳನ್ನು ಕೈಗೊಳ್ಳಲಾಗಿದೆ, ಸಮರ್ಥಿಸಿ.

**VI. 38. ನಿಮಗೆ ಒದಗಿಸಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ ಐದನ್ನು ಗುರುತಿಸಿ. 5x1=5**

A) ಕರ್ಕಾಟಕ ಸಂಕ್ರಾಂತಿ ವೃತ್ತ

B) ಹನುಮಾನ್ ನಗರ

C) ಮುಂಬೈ

D) ನರೋರ

E) ಕೋರಮಂಡಲ ತೀರ

F) ಪಾರಾದೀಪ್

G) ಕನ್ಯಾಕುಮಾರಿ

H) ಕೆ2 – ಗಾಡ್ವಿನ್ ಆಸ್ಟಿನ್

I) ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

J) ದೆಹಲಿ

**ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ:**

**(ಪ್ರಶ್ನೆಸಂಖ್ಯೆ 38ರ ಬದಲಿಗೆ)**

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳಾವುವು?

ಅಥವಾ

ಭಾರತದ ಇತಿಹಾಸದಲ್ಲಿ ಹಿಮಾಲಯ ಪರ್ವತಗಳ ಮಹತ್ವವೇನು?